JULY 14, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಆಗಸ್ಟ್ 6 ರಿಂದ,** ರಾಜ್ಯ ವಿಧಾನಮಂಡಲ ಅಧಿವೇಶನ.

**ಭಾರತ್ ಜೋಡೋ;** 10 ಸಾವಿರ, ಯುವ ಸಂಘಗಳ ಸ್ಥಾಪನೆಗೆ, ರಾಜ್ಯ ಸರ್ಕಾರ ಯೋಜನೆ.

**ರಾಯಚೂರು ಜಿಲ್ಲೆಯ,** 317 ಕೆರೆಗಳ ಒತ್ತುವರಿ ತೆರವಿಗಾಗಿ, ಲೋಕಾಯುಕ್ತರಿಂದ, ಸಾರ್ವಜನಿಕ ಹಿತಾಸಕ್ತಿ ಪ್ರಕರಣ, ದಾಖಲು.

**ದೇಶಾದ್ಯಂತ,** 104 ವಿಮಾನ ನಿಲ್ದಾಣಗಳಲ್ಲಿ, ಸಂಪೂರ್ಣ ಸ್ವಚ್ಛ ಇಂಧನ ಬಳಕೆ – ಸಚಿವ ಪ್ರಲ್ಹಾದ ಜೋಶಿ, ಮಾಹಿತಿ.

<><><>

**ಈಗ ವಾರ್ತೆಗಳ ವಿವರ**

<><><>

**ವಿಧಾನಮಂಡಲ ಅಧಿವೇಶನ, ಮುಂದಿನ ತಿಂಗಳು,** ಆಗಸ್ಟ್ 6 ರಿಂದ ನಡೆಯಲಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಬೆಂಗಳೂರಿನಲ್ಲಿ ಈ ವಿಷಯ ತಿಳಿಸಿದ್ದಾರೆ. ನಾಳೆ, ಕಾವೇರಿ ಮಂಡಳಿ ಸಭೆ ನಡೆಯಲಿದ್ದು, ತಮಿಳುನಾಡಿಗೆ ನೀರು ಹರಿಸುವ ಕುರಿತು, ನಿರ್ಧರಿಸಲಾಗುವುದು. ರಾಜ್ಯದ ಜಲಾಶಯದ ಪ್ರಸ್ತುತ ಸ್ಥಿತಿಗತಿ ಆಧರಿಸಿ, ರಾಜ್ಯದ ನಿಲುವು, ಸಭೆಯಲ್ಲಿ ಸ್ಪಷ್ಟ ಪಡಿಸಲಾಗುವುದು ಎಂದರು. ಪಕ್ಷದ ವರಿಷ್ಠರು, ಮುಂಬರುವ ಮೂರ್ನಾಲ್ಕು ದಿನಗಳಲ್ಲಿ, ಹೊಸ ದಿಲ್ಲಿಗೆ ಆಹ್ವಾನಿಸುವ ನಿರೀಕ್ಷೆ ಇದ್ದು, ಸಚಿವ ಸಂಪುಟ ವಿಸ್ತರಣೆ ಬಗ್ಗೆ ಚರ್ಚಿಸುವುದಾಗಿ, ನುಡಿದರು.

<><><>

**10 ಸಾವಿರ, ಭಾರತ್ ಜೋಡೋ ಯುವ ಸಂಘಗಳನ್ನು** ಸ್ಥಾಪಿಸಲು, ಯೋಜಿಸಲಾಗಿದೆ ಎಂದು, ಉಪ ಮುಖ್ಯಮಂತ್ರಿ ಡಾಕ್ಟರ್ ಜಿ. ಪರಮೇಶ್ವರ, ತಿಳಿಸಿದ್ದಾರೆ. ಯುವಜನರಲ್ಲಿ ಕ್ರೀಡೆ, ಸಂಸ್ಕೃತಿ, ವೈಜ್ಞಾನಿಕ ಮನೋಭಾವ ಹಾಗೂ ಸಾಮಾಜಿಕ ಸಾಮರಸ್ಯವನ್ನು ಉತ್ತೇಜಿಸಲು, ಗ್ರಾಮ ಪಂಚಾಯಿತಿ ಮತ್ತು ನಗರದ ವಾರ್ಡ್‌ಗಳ ವ್ಯಾಪ್ತಿಯಲ್ಲಿ, ಭಾರತ ಜೋಡೋ ಯುವ ಸಂಘಗಳು, ಸದ್ಯದಲ್ಲೇ ಕಾರ್ಯಾರಂಭಿಸಲಿವೆ ಎಂದು, ಎಕ್ಸ್ ಮಾಧ್ಯಮದಲ್ಲಿ, ಪ್ರಕಟಿಸಿದ್ದಾರೆ. ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ, ಅನುಷ್ಠಾನಗೊಳಿಸಲಿದ್ದು, ಪ್ರತಿಯೊಂದು ಸಂಘದ ಓರ್ವ ತರಬೇತುದಾರರಿಗೆ, ವಾರ್ಷಿಕ ತಲಾ 24 ಸಾವಿರ ರೂಪಾಯಿ ಗೌರವಧನದ ಜೊತೆಗೆ, ಪ್ರತಿ ಸಂಘಕ್ಕೆ ವಾರ್ಷಿಕ ತಲಾ 10 ಲಕ್ಷ ರೂಪಾಯಿ ಅನುದಾನ ನೀಡಲಾಗುವುದು ಎಂದಿದ್ದಾರೆ. ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ, ಒಂದು ಸಂಘ, ಪ್ರತಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ, ಸರಾಸರಿ 4 ಸಾವಿರ ಜನಸಂಖ್ಯೆಗೆ, ಒಂದು ಸಂಘ ರಚಿಸಲು, ಆದೇಶಿಸಲಾಗಿದೆ.

<><><>

**ರಾಯಚೂರು ಜಿಲ್ಲೆಯಲ್ಲಿ, 319 ಕೆರೆಗಳಿದ್ದು,** 317 ಕೆರೆಗಳ ಒತ್ತುವರಿ ತೆರವಿಗಾಗಿ, ಸಾರ್ವಜನಿಕ ಹಿತಾಸಕ್ತಿ ಅಡಿ, ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು, ಲೋಕಾಯುಕ್ತ, ನ್ಯಾಯಮೂರ್ತಿ ಬಿ.ಎಸ್.ಪಾಟೀಲ ತಿಳಿಸಿದ್ದಾರೆ. ರಾಯಚೂರಿನ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ, ಜಿಲ್ಲಾ ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಅವರು ಸಭೆ ನಡೆಸಿದರು. ದೇವದುರ್ಗ ಹಾಗೂ ಮಾನ್ವಿ ತಾಲೂಕಿನ ಗ್ರಾಮಗಳಲ್ಲಿ, ಶುದ್ಧ ಕುಡಿಯುವ ನೀರು ದೊರೆಯದ ಹಿನ್ನೆಲೆ, ಗ್ರಾಮಸ್ಥರು, ಅನಾರೋಗ್ಯದ ಸಮಸ್ಯೆ ಎದುರಿಸುತ್ತಿದ್ದಾರೆ. ಲೋಕಾಯುಕ್ತರು, ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು, ವಿಚಾರಣೆ ಆರಂಭಿಸಿದೆ ಎಂದರು. ರಾಯಚೂರು ಜಿಲ್ಲೆಯ, 811 ಹಳ್ಳಿಗಳ ಪೈಕಿ, 700 ಹಳ್ಳಿಗಳಲ್ಲಿ, ಕುಡಿಯುವ ನೀರು ಶುದ್ಧೀಕರಣಕ್ಕಾಗಿ, ರಿವರ್ಸ್ ಆಸ್ಮೋಸಿಸ್ ಘಟಕಗಳನ್ನು ಸ್ಥಾಪಿಸಲಾಗಿದೆ ಎಂದು, ಲೋಕಾಯುಕ್ತರು ಮಾಹಿತಿ ನೀಡಿದರು.

<><><>

**ಕಲಬುರಗಿ ನಗರಕ್ಕೆ ಕುಡಿಯುವ** ನೀರು ಪೂರೈಸುವ ಯೋಜನೆಯನ್ನು, 2027ರ ಜೂನ್ ತಿಂಗಳೊಳಗೆ, ಪೂರ್ಣಗೊಳಿಸುವಂತೆ, ನಗರಾಭಿವೃದ್ಧಿ ಖಾತೆ ಸಚಿವ ಯತೀಂದ್ರ ಸಿದ್ದರಾಮಯ್ಯ, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಅಧಿಕಾರಿಗಳಿಗೆ, ಸೂಚಿಸಿದ್ದಾರೆ. ಕಲಬುರಗಿಯ ಜಲಭವನದಲ್ಲಿ, ಪ್ರಗತಿ ಪರಿಶೀಲಿಸಿ, ಅವರು ಮಾತನಾಡಿದರು. ಕಲಬುರಗಿ ನಗರದ, 55 ವಾರ್ಡ್‌ಗಳಲ್ಲಿ, 62 ಸಾವಿರದ 767 ಮನೆಗಳ ಪೈಕಿ, 30 ಸಾವಿರದ 907 ಮನೆಗಳಿಗೆ ಮಾತ್ರ, ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ. ಉಳಿದ 31 ಸಾವಿರದ 860 ಮನೆಗಳಿಗೆ, ಕೊಳವೆ ಸಂಪರ್ಕ ನೀಡಬೇಕಿದೆ ಎಂದರು. ಅಧೀಕ್ಷಕ ಅಭಿಯಂತರರು ಮಾಹಿತಿ ನೀಡಿ, ಸರಡಗಿ ಬ್ಯಾರೇಜಿಗೆ, ನಾರಾಯಣಪುರ ಜಲಾಶಯದಿಂದ ಸೊನ್ನೆ ದಶಾಂಶ 5 ಟಿ.ಎಂ.ಸಿ. ಅಡಿ ನೀರನ್ನು ಕಾಲುವೆಗೆ ಹರಿಸಲಾಗಿದೆ. ಮುಂದಿನ 45 ದಿನ, ಶುದ್ಧೀಕರಿಸಿದ ನೀರು ಪೂರೈಸಲಾಗುವುದು, ಎಂದು, ಹೇಳಿದರು.

<><><>

**ಯುನೆಸ್ಕೋ ವಿಶ್ವ ಪಾರಂಪರಿಕ ತಾಣ,** ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕಿನ, ಹಂಪಿಯ, ಆನೆ ಲಾಯದ ಹಿಂಭಾಗದಲ್ಲಿ, ಉತ್ಖನನ ಕೈಗೊಳ್ಳಲಾಗಿದ್ದು, ಜೈನ ತ್ರಿಕೂಟ ದೇಗುಲದ ಅವಶೇಷಗಳು ಪತ್ತೆಯಾಗಿವೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ, ಹಂಪಿ ವಲಯದ, ಉಪ ಅಧೀಕ್ಷಕ, ಡಾಕ್ಟರ್ ಎಸ್.ಎಂ. ದೇವರಾಜು.

<><><>

**ಎಸ್.ಎಂ ದೇವರಾಜು ಧ್ವನಿ– 43 ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಪ್ರಸ್ತುತ 104 ವಿಮಾನ ನಿಲ್ದಾಣಗಳು,** ಪುನರ್ ಬಳಕೆ ಇಂಧನ ಬಳಸುತ್ತಿದ್ದು, ಸ್ವಚ್ಛ ಇಂಧನ ಬಳಸುವ, ಪ್ರತಿ ವಿಮಾನ ನಿಲ್ದಾಣ, ಸುಸ್ಥಿರ ಭವಿಷ್ಯದೆಡೆಗೆ, ರಾಷ್ಟ್ರದ ಬದ್ಧತೆಯ ಸಂಕೇತವಾಗಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ಹಸಿರು ಇಂಧನ ಕ್ರಾಂತಿಯ ಕನಸು ಸಾಕಾರಗೊಂಡಿದ್ದು, ಭಾರತ ಸ್ವಚ್ಛ ಇಂಧನ ವಲಯದಲ್ಲಿ, ಜಾಗತಿಕ ಮೈಲಿಗಲ್ಲುಗಳನ್ನು ಸಾಧಿಸುತ್ತಿದೆ. 2070ರ ವೇಳೆಗೆ, ಇಂಗಾಲದ ಹೆಜ್ಜೆ ಗುರುತು, ಶೂನ್ಯಗೊಳಿಸುವ ಗುರಿ ಸಾಧನೆಯತ್ತ, ದೃಢವಾಗಿ ಮುನ್ನಡೆಯುತ್ತಿದೆ ಎಂದು, ಸಂತಸ ವ್ಯಕ್ತ ಪಡಿಸಿದ್ದಾರೆ.

<><><>

**ಮತದಾರರ ಪಟ್ಟಿ** ವಿಶೇಷ ಪರಿಷ್ಕರಣೆ ಕಾರ್ಯದಲ್ಲಿ, ಶೇಕಡ 100 ರಷ್ಟು ಪ್ರಗತಿ ಸಾಧಿಸಿದ, ಬಾಗಲಕೋಟೆ ಜಿಲ್ಲೆ, ಸೀತಿಮನಿ ಹೋಬಳಿಯ, ಚಿಟಕನಕೊಪ್ಪ ಗ್ರಾಮದ ಬೂತ ಮಟ್ಟದ ಅಧಿಕಾರಿ, ಸುನೀಲ ಪಾಟೀಲ ಅವರನ್ನು, ಜಿಲ್ಲಾಧಿಕಾರಿ ಸಂಗಪ್ಪ ಸನ್ಮಾನಿಸಿದರು. ಮಾದರಿ ಕಾರ್ಯಕ್ಕಾಗಿ ಅಭಿನಂದಿಸಿದರು. ಕಲಬುರಗಿ ಜಿಲ್ಲೆಯಲ್ಲಿ, ಶೇಕಡ 97 ದಶಾಂಶ 8–6ರಷ್ಟು ಗಣತಿ ನಮೂನೆ ವಿತರಿಸಲಾಗಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ ಇಕ್ರಮ್ ಶರೀಫ ತಿಳಿಸಿದ್ದಾರೆ.

<><><>

**ಬಾಗಲಕೋಟೆ ಜಿಲ್ಲೆ, ಮುಗಳಖೋಡದ,** ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಬಿಸಿಯೂಟ ಸೇವಿಸಿದ ಬಳಿಕ, 12 ವಿದ್ಯಾರ್ಥಿಗಳಲ್ಲಿ, ಅತಿಸಾರದ ಲಕ್ಷಣಗಳು ಕಾಣಿಸಿಕೊಂಡಿದ್ದು, 9 ಮಕ್ಕಳನ್ನು, ಮುಧೋಳ ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ. ನಿರ್ಜಲೀಕರಣ ಸಮಸ್ಯೆಯಿಂದ ಬಳಲಿದ, ಮೂವರು ಮಕ್ಕಳನ್ನು, ಬಾಗಲಕೋಟೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದು, ಎಲ್ಲ ಮಕ್ಕಳೂ ಚೇತರಿಸಿಕೊಂಡಿದ್ದಾರೆ. ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿಲ್ಲಾ ಪಂಚಾಯಿತಿ ಸಿ.ಇ.ಓ. ಗಜಾನನ ಬಾಲೆ ಆಸ್ಪತ್ರೆಗೆ ಭೇಟಿ ನೀಡಿ, ಮಕ್ಕಳ ಆರೋಗ್ಯ ವಿಚಾರಿಸಿದರು. ಮುಧೋಳ ಕ್ಷೇತ್ರದ ಶಾಸಕ ಆರ್.ಬಿ. ತಿಮ್ಮಾಪೂರ, ಮಕ್ಕಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ, ವೈದ್ಯರಿಗೆ ಸೂಚಿಸಿದರು.

<><><>

**ಇಂದು ಮಣ್ಣೆತ್ತಿನ ಅಮಾವಾಸ್ಯೆ.** ಉತ್ತರ ಕರ್ನಾಟಕ ಭಾಗದಲ್ಲಿ, ಮಣ್ಣೆತ್ತುಗಳನ್ನು ಪೂಜಿಸಿ, ಕೃಷಿ ಉಪಕರಣಗಳಿಗೆ ಪೂಜೆ ಸಲ್ಲಿಸಿ, ನೈವೇದ್ಯ ಸಮರ್ಪಿಸಿ, ಮಣ್ಣು ಪೂಜೆಯ ಈ ಹಬ್ಬವನ್ನು, ಗ್ರಾಮೀಣ ಸೊಗಡು ಹಾಗೂ ಪರಂಪರೆಯೊಂದಿಗೆ, ವಿಶೇಷವಾಗಿ ಆಚರಿಸಲಾಗುತ್ತಿದೆ. ಪ್ರದೇಶ ಸಮಾಚಾರಕ್ಕಾಗಿ ಮಣ್ಣೆತ್ತಿನ ಅಮಾವಾಸ್ಯೆ ಆಚರಣೆ ಮಹತ್ವ ತಿಳಿಸಿದ್ದಾರೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಅಮರಗೋಳದ ಹಿರಿಯ ಜಾನಪದ ವಿದ್ವಾಂಸ, ಡಾಕ್ಟರ್ ರಾಮಣ್ಣ ಮೂಲಗಿ.

<><><>

**ರಾಮಣ್ಣ ಮೂಲಗಿ ಧ್ವನಿ – 39 ಸೆಕೆಂದುಗಳು**

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

**ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ,** ನೂತನ ಮೆಮು ರೈಲಿಗೆ, ತುಮಕೂರು ಜಿಲ್ಲೆಯ, ತಿಪಟೂರು ರೈಲು ನಿಲ್ದಾಣದಲ್ಲಿ, ಚಾಲನೆ ನೀಡಿದರು.

**ರಾಜ್ಯಪಾಲ ಥಾವರಚಂದ ಗೆಹ್ಲೋಟ,** ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಅವರನ್ನು, ಅಮಾನತುಗೊಳಿಸಿ, ಸೂಕ್ತ ಕ್ರಮಕ್ಕಾಗಿ, ರಾಷ್ಟ್ರಪತಿಯವರನ್ನು, ಕೋರಿದ್ದಾರೆ.

**ಭಾರತೀಯ ಸಂಚಾರ ನಿಗಮ ನಿಯಮಿತ,** ದಾವಣಗೆರೆ ಜಿಲ್ಲೆಯ, 6 ಗ್ರಾಮಗಳಲ್ಲಿ ಫೋರ್–ಜಿ ಟಾವರ್ ಸ್ಥಾಪಿಸಿ, ಗ್ರಾಹಕರಿಗೆ ಸುಗಮ ಸಂಪರ್ಕ ಕಲ್ಪಿಸಲಿದೆ ಎಂದು, ಸಂಸದರಾದ ಡಾಕ್ಟರ್ ಪ್ರಭಾ ಮಲ್ಲಿಕಾರ್ಜುನ ತಿಳಿಸಿದ್ದಾರೆ.

**ಅಂತಾರಾಜ್ಯ ಮಟ್ಟದ, ಆನ್‌ಲೈನ್ ಬೆಟ್ಟಿಂಗ್** ಜಾಲವನ್ನು ಭೇದಿಸಿ, ಕಡಿವಾಣ ಹಾಕಲು, ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು, ಮೇಲ್ಮನೆ ಶಾಸಕ ಸಿ.ಟಿ ರವಿ ಆಗ್ರಹಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಆಗಸ್ಟ್ 6 ರಿಂದ,** ರಾಜ್ಯ ವಿಧಾನಮಂಡಲ ಅಧಿವೇಶನ.

**ಭಾರತ್ ಜೋಡೋ;** 10 ಸಾವಿರ, ಯುವ ಸಂಘಗಳ ಸ್ಥಾಪನೆಗೆ, ರಾಜ್ಯ ಸರ್ಕಾರ ಯೋಜನೆ.

**ರಾಯಚೂರು ಜಿಲ್ಲೆಯ,** 317 ಕೆರೆಗಳ ಒತ್ತುವರಿ ತೆರವಿಗಾಗಿ, ಲೋಕಾಯುಕ್ತರಿಂದ, ಸಾರ್ವಜನಿಕ ಹಿತಾಸಕ್ತಿ ಪ್ರಕರಣ, ದಾಖಲು.

**ದೇಶಾದ್ಯಂತ,** 104 ವಿಮಾನ ನಿಲ್ದಾಣಗಳಲ್ಲಿ, ಸಂಪೂರ್ಣ ಸ್ವಚ್ಛ ಇಂಧನ ಬಳಕೆ – ಸಚಿವ ಪ್ರಲ್ಹಾದ ಜೋಶಿ, ಮಾಹಿತಿ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>